## ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.1264/2020

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ಶೃತಿ | CW: 1 | PW: 1 |
| ಗಂಡನ ಹೆಸರು | : | ರವಿಕುಮಾರ | | |
| ವಯಸ್ಸು | : | 30 | | |
| ವೃತ್ತಿ | : | ಮನೆಕೆಲಸ | | |
| ವಾಸಸ್ಥಳ | : | ಮಲ್ಲಿಗೇನಹಳ್ಳಿ | | |

ದಿನಾಂಕಃ 17.04.2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ – ಮಾನ್ಯ ಸ.ಸ.ಅ.ರವರಿಂದಃ–

ಆರೋಪಿಗಳು ಗೊತ್ತು. ಚಾಸಾ 2 ರಿಂದ 12 ರವರು ಗೊತ್ತು. ದಿಃ 02.03.2017 ರಂದು ಮಲ್ಲಿಗೇನಹಳ್ಳಿ ಗ್ರಾಮದಲ್ಲಿ 1 ನೇ ಆರೋಪಿಯ ಜೊತೆ ಮದುವೆಯಾಗಿರುತ್ತೇನೆ. ಮದುವೆ ಸಂದರ್ಭ ನನ್ನ ತಂದೆ 1,05,000/– ರೂ ಗಳನ್ನು ಮದುವೆ ಖರ್ಚಿಗೆ ಎಂದು 2 ಮತ್ತು 4 ನೇ ಆರೋಪಿತರ ಕೈಗೆ ನೀಡಿದ್ದು, 8 ತೊಲ ಬಂಗಾರವನ್ನು 1 ನೇ ಆರೋಪಿಗೆ ನೀಡಿರುತ್ತಾರೆ. ಮದುವೆಯಾದ 8–9 ತಿಂಗಳು ಚೆನ್ನಾಗಿದ್ದು ಮಲ್ಲಿಗೇನಹಳ್ಳಿ ಗ್ರಾಮದ ನನ್ನ ಗಂಡನ ಮನೆಯಲ್ಲಿ ವಾಸವಿದ್ದೆವು. 2 ಮತ್ತು 4 ನೇ ಆರೋಪಿತರು ವರದಕ್ಷಿಣೆ ತೆಗೆದುಕೊಂಡು ಬಾ ಎಂದು ನನಗೆ ಕಿರುಕುಳ ನೀಡಲು ಪ್ರಾರಂಭಿಸಿದರು. ಮದುವೆಯಾದ 7–8 ತಿಂಗಳ ನಂತರ ನಾನು ಗರ್ಭಿಣಿಯಾಗಿದ್ದಾಗ 1, 2 ಮತ್ತು 4 ನೇ ಆರೋಪಿತರು ನನ್ನ ಮೇಲೆ ಜಗಳ ಮಾಡಿದರು. ಊರಿನ ಹಿರಿಯರು ನನಗೂ ಮತ್ತು 1, 2 ಮತ್ತು 4 ನೇ ಆರೋಪಿತರಿಗೆ ಬುದ್ಧಿ ಹೇಳಿ ಹರಳಹಳ್ಳಿಯ ನನ್ನ ತವರು ಮನೆಗೆ ಹೆರಿಗೆಗೆ ಕರೆದುಕೊಂಡಿರುತ್ತಾರೆ. ಹೆರಿಗೆಯಾದ ನಂತರ ನನ್ನನ್ನು

ಗಂಡನ ಮನೆಗೆ ಕರೆದುಕೊಳ್ಳದೆ 1, 2 ಮತ್ತು 4 ನೇ ಆರೋಪಿತರು ಮಲ್ಲಿಗೇನಹಳ್ಳಿ ಗ್ರಾಮದಲ್ಲಿ ನನಗೆ ಪ್ರತ್ಯೇಕ ಬಾಡಿಗೆ ಮನೆ ಮಾಡಿದ್ದರು. ಆಗ ನನ್ನ ತಂದೆ ಮತ್ತು ಚಾಸಾ 8 ರವರು ನಾವು ಬಾಡಿಗೆ ಮನೆಗೆ ಕಳುಹಿಸುವುದಿಲ್ಲ ಮದುವೆ ಮಾಡಿರುವುದು ಗಂಡನ ಮನೆಯಲ್ಲಿ ವಾಸ ಮಾಡಬೇಕು ಎಂದು ಗಂಡನ ಮನೆಗೆ ನನ್ನನ್ನು ಕಳುಹಿಸಿದರು. ನಂತರ 15-20 ದಿನಗಳ ಕಾಲ ಚೆನ್ನಾಗಿ ನೋಡಿಕೊಂಡಿದ್ದರು ಸಹ ಪುನಃ ನನ್ನ ಮೇಲೆ ಜಗಳ ಮಾಡಲು ಶುರುಮಾಡಿದರು.

ದಿಃ 08.12.2018 ರಂದು 1 ನೇ ಆರೋಪಿಯು 2 ಮತ್ತು 4 ನೇ ಆರೋಪಿತರ ಕುಮ್ಮಕ್ಕಿನಿಂದ ನನ್ನ ಮಗಳ ಮೇಲೆ ಹಲ್ಲೆ ಮಾಡಿ ಕಾಲನ್ನು ತಿರುವಿ ಮುರಿದಿರುತ್ತಾನೆ. ದಾವಣಗೆರೆ ಆಸ್ಪತ್ರೆಗೆ ಮಗಳನ್ನು ಸೇರಿಸಿ 2 ತಿಂಗಳ ಕಾಲ ದಾವಣಗೆರೆಯಲ್ಲೇ ಇದ್ದು ನನ್ನ ಮಗಳ ಆರೈಕೆ ಮಾಡಿರುತ್ತೇನೆ. ನಂತರ ಮಲ್ಲಿಗೇನಹಳ್ಳಿಯ ಗಂಡನ ಮನೆಗೆ ಬಂದಾಗ ಸ್ವಲ್ಪ ದಿನ ಚೆನ್ನಾಗಿ ನೋಡಿಕೊಂಡರು. 2 ತಿಂಗಳ ನಂತರ ಅಂಗಡಿ ಬಸವರಾಜಪ್ಪರವರ ಮನೆಯ ಮುಂಭಾಗ 2 ನೇ ಆರೋಪಿಯು ನನ್ನ ಮೇಲೆ ಹಲ್ಲೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದರು. ಆಗ ಚಾಸಾ 2 ಹಾಗೂ ಬಸವರಾಜಪ್ಪರವರು ನಮ್ಮ ಅಣ್ಣ ಹನುಮಗೌಡರವರಿಗೆ ಗಲಾಟೆಯ ವಿಚಾರವನ್ನು ತಿಳಿಸಿದ್ದರಿಂದ ನನ್ನ ಅಣ್ಣ ನನ್ನನ್ನು ತವರು ಮನೆಗೆ ಕರೆದುಕೊಂಡು ಹೋದ. ತವರು ಮನೆಯಲ್ಲಿ ನಾನು 7-8 ತಿಂಗಳು ವಾಸವಿದ್ದೆ. ನಂತರ ನಾನು ನನ್ನ ಗಂಡನ ಮನೆಗೆ ಹೋದಾಗ ನನ್ನನ್ನು 2 ಮತ್ತು 4 ನೇ ಆರೋಪಿಗಳು ಮನೆಯ ಒಳಗೆ ಕರೆದುಕೊಳ್ಳಲಿಲ್ಲ. ನಾನು ಯಾವ ಕಾರಣಕ್ಕೂ ವಾಪಾಸ್ ಹೋಗುವುದಿಲ್ಲ ಎಂದು ಮನೆಯ ಒಳಗೆ ಹೋದೆ. ಆಗ 3 ನೇ ಆರೋಪಿಯು ಬಂದು ನನ್ನ ಮೇಲೆ ಜಗಳ ಮಾಡಿದ. ಒಂದು ವಾರದ ನಂತರ ನನ್ನ ತಂಗಿಯ ನಿಶ್ಚಿತಾರ್ಥ ಇದೆ ಎಂದು ನನ್ನ ತವರು ಮನೆಗೆ ಹೋದೆ. 4 ದಿನದ ನಂತರ ಪುನಃ ನನ್ನ ಗಂಡನ ಮನೆಗೆ ನನ್ನ ತಂದೆಯ ಜೊತೆ ಹೋದೆ. ಆಗ 2 ಮತ್ತು 4 ನೇ ಆರೋಪಿತರು ನನ್ನ ತಂದೆಯ ಮೇಲೆ ಹಲ್ಲೆ ಮಾಡಿ ನನ್ನ ತಂದೆಯ ಮೇಲೆ ನ್ಯಾಮತಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿರುತ್ತಾರೆ. ಸುಮಾರು 15 ದಿನ ನನ್ನನ್ನು ಮನೆಯ ಒಳಗೆ ಕರೆದುಕೊಳ್ಳದೇ ಇದ್ದುದ್ದರಿಂದ ಮನೆಯ ಮುಂದೆ ಇದ್ದ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಉಳಿದುಕೊಂಡಿದ್ದೆ. ನಂತರ ಪೊಲೀಸ್ ಠಾಣೆಗೆ ಹೋಗಿ ನನ್ನನ್ನು ಮನೆಗೆ

ಬಿಟ್ಟುಕೊಳ್ಳುತ್ತಿಲ್ಲ ಎಂದು ಪೋಲೀಸರಿಗೆ ಹೇಳಿದಾಗ ಪೊಲೀಸರು ಹೇಳಿದಂತೆ ನಾನು ನನ್ನ ಗಂಡನ ಮನೆಗೆ ವಾಪಾಸ್ ಬಂದು ಮನೆಯ ಬೀಗವನ್ನು ಹೊಡೆದು ಮನೆಯ ಒಳಗೆ ಹೋದೆ.

ದಿಃ 07.05.2020 ರಂದು ನಾನು ಮನೆಯಲ್ಲಿದ್ದಾಗ 2 ರಿಂದ 8 ನೇ ಆರೋಪಿತರು ನನ್ನನ್ನು ಹೊಡೆದು ಅವಾಚ್ಯ ಶಬ್ದಗಳಿಂದ ಬೈದರು. 2, 4 ಮತ್ತು 6 ನೇ ಆರೋಪಿತರು ಹಿತ್ತಲಿನಲ್ಲಿದ್ದ ಟಮೋಟೋ ಕೋಲಿನಿಂದ ನನಗೆ ಹೊಡೆದರು. ನನ್ನ ಗಂಡನನ್ನು ಕಳುಹಿಸಿ ಎಂದು ಕೇಳಿದಾಗ ಮನೆ ರಿಪೇರಿ ಮಾಡಿಸಲು ನಿನ್ನ ತವರು ಮನೆಯಿಂದ ಹಣ ತೆಗೆದುಕೊಂಡು ಬಂದರೆ ಮಾತ್ರ ನಿನ್ನನ್ನು ನಿನ್ನ ಗಂಡನ ಜೊತೆ ಸಂಸಾರ ಮಾಡಲು ಬಿಡುತ್ತೇವೆ ಇಲ್ಲದಿದ್ದರೆ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿದರು. 3 ನೇ ಆರೋಪಿಯು ನನ್ನ ಜಡೆ ಮತ್ತು ಬಟ್ಟೆಯನ್ನು ಎಳೆದು ಹಲ್ಲೆ ಮಾಡಿ ಕೊಲೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿದನು. 5 ಮತ್ತು 8 ನೇ ಆರೋಪಿತರು ನನಗೆ ಬಹಳ ಹಿಂಸೆ ನೀಡಿರುತ್ತಾರೆ. ನಾನು ಮನೆಯಲ್ಲಿದ್ದಾಗ ಬನ್ನಿ ಗಲಾಟೆ ಮಾಡಿ ಹೊಡಿರಿ ಎಂದು 6 ನೇ ಆರೋಪಿಯು 1, 2 ಮತ್ತು 4 ನೇ ಆರೋಪಿತರಿಗೆ ಪೋನ್ ಮಾಡಿ ಪ್ರಚೋದನೆ ನೀಡುತ್ತಿದ್ದರು.

ನನಗೆ ತುಂಬಾ ಹೊಡೆದಿದ್ದರಿಂದ ನನ್ನ ತಂದೆಗೆ ಕರೆಮಾಡಿ ಹೊನ್ನಾಳಿ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಾಗಿದ್ದೆ. 4 ದಿನ ಆಸ್ಪತ್ರೆಯಲ್ಲಿದ್ದು ದಿಃ 11.05.2020 ರಂದು ನ್ಯಾಮತಿ ಪೊಲೀಸ್ ಠಾಣೆಯಲ್ಲಿ ಆರೋಪಿಗಳ ವಿರುದ್ಧ ದೂರು ಕೊಟ್ಟಿರುತ್ತೇನೆ. ದಿಃ 12.05.2020 ರಂದು ಮಲ್ಲಿಗೇನಹಳ್ಳಿ ಗ್ರಾಮದ ನನ್ನ ಗಂಡನ ಮನೆಯಲ್ಲಿ ನಾನು ಸ್ಥಳ ತೋರಿಸಿದ ಮೇರೆಗೆ ಪೋಲೀಸರು ಬಂದು ಮಹಜರ್ ಮಾಡಿದರು. ಆಗ ಸಮಯ ಬೆಳಿಗ್ಗೆ 10.30 ರಿಂದ 12.30 ಆಗಿತ್ತು. ಮಹಜರ್ ಸಮಯದಲ್ಲಿ ಚಾಸಾ 9 ಮತ್ತು 10 ರವರು ಹಾಜರಿದ್ದರು. ಮಹಜರ್ ಸಂದರ್ಭ ಪೋಟೋಗಳನ್ನು ತೆಗೆದು ನನ್ನ ಮೇಲೆ ಹಲ್ಲೆ ಮಾಡಿರುವ ಕೋಲನ್ನು ವಶಪಡಿಸಿಕೊಂಡು ಮಹಜರ್ ಗೆ ನನ್ನಿಂದ ಸಹಿ ಪಡೆದುಕೊಂಡರು. ಪೋಲೀಸರು ನನಗೆ ಹಲ್ಲೆಯ ಸಂದರ್ಭ ಹಾಕಿಕೊಂಡಿದ್ದ ಬಟ್ಟೆಯನ್ನು ನೀಡುವಂತೆ ಹಾಗೂ ಮದುವೆಯ ಪೋಟೋಗಳು ಮತ್ತು ಆಮಂತ್ರಣ ಪತ್ರಿಕೆ, ಒಡವೆಯ ಚೀಟಿಯನ್ನು ಕೇಳಿದ್ದರಿಂದ ನಾನು ದಿಃ 23.05.2020 ರಂದು ನ್ಯಾಮತಿ ಪೊಲೀಸ್ ಠಾಣೆಗೆ ಹೋಗಿ ಚಾಸಾ 18 ರವರಿಗೆ ಬಟ್ಟೆ , ಮದುವೆಯ ಪೋಟೋಗಳು ಮತ್ತು ಆಮಂತ್ರಣ ಪತ್ರಿಕೆ,

ಒಡವೆಯ ಚೀಟಿಯನ್ನು ನೀಡಿರುತ್ತೇನೆ. ಆ ಸಂದರ್ಭ ಪೊಲೀಸರು ಮಹಜರ್ ಮಾಡಿ ನನ್ನ ಸಹಿಯನ್ನು ಪಡೆದುಕೊಂಡು ಅವುಗಳನ್ನು ವಶಕ್ಕೆ ಪಡೆದುಕೊಂಡರು. ಆಗ ಸಮಯ ಬೆಳಗ್ಗೆ 10.30 ರಿಂದ 11.30–12 ಗಂಟೆ ಆಗಿತ್ತು. ಇಷ್ಟು ಗಲಾಟೆಯಾದ ನಂತರವು ಸಹ ನಾನು ಹಗಲಿನಲ್ಲಿ ನನ್ನ ಗಂಡನ ಮನೆಯಲ್ಲಿ ವಾಸವಿದ್ದು ರಾತ್ರಿಯ ಹೊತ್ತು ಮನೆಯ ಮುಂದೆ ಇರುವ ದೇವಸ್ಥಾನದಲ್ಲಿ ಮಲಗಿಕೊಳ್ಳುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯ ದೂರನ್ನು ಹಾಗೂ ದೂರಿನಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ 1 ಎಂದು , ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು, ಸ್ಥಳ ಪಂಚನಾಮೆಯನ್ನು ನಿಪಿ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ 2(ಎ) ಎಂದು, ಅಮಾನತ್ತು ಪಂಚನಾಮೆಯನ್ನು ನಿಪಿ 3 ಎಂದು, ಸಾಕ್ಷಿಯ ಸಹಿಯನ್ನು ನಿಪಿ 3(ಎ) ಎಂದು, ಸ್ಥಳ ಪಂಚನಾಮೆ ಸಂದರ್ಭ ತೆಗೆದ 4 ಪೋಟೋಗಳನ್ನು ನಿಪಿ 4 ರಿಂದ 7 ಎಂದು, ಅಮಾನತ್ತು ಪಂಚನಾಮೆ ಸಂದರ್ಭ ತೆಗೆದ 1 ಪೋಟೋವನ್ನು ನಿಪಿ 8 ಎಂದು, ವಿವಾಹ ಆಮಂತ್ರಣ ಪತ್ರಿಕೆಯನ್ನು ನಿಪಿ 9 ಎಂದು, ಮದುವೆ ಸಂದರ್ಭ ತೆಗೆದ 2 ಪೋಟೋಗಳನ್ನು ನಿಪಿ 10 ಮತ್ತು 11 ಎಂದು, ಸಿಡಿಯನ್ನು ನಿಪಿ 12 ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ತನ್ನ ಚೂಡಿದಾರ್ ಟಾಪ್ ನ್ನು ಮತ್ತು 2 ಕೋಲುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮು.ಮಾ 1 ರಿಂದ 3 ಎಂದು ಗುರುತಿಸಲಾಯಿತು.

(ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.)

ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ–

ಸ್ಥಳ ಪಂಚನಾಮೆ ಸಂದರ್ಭ ಪೊಲೀಸರು ಕಚ್ಚಾ ನಕಾಶೆಯನ್ನು ತಯರಿಸಿ , ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಕಚ್ಚಾ ನಕಾಶೆಯಲ್ಲಿರುವ ತನ್ನ ಸಹಿಯನ್ನು ನೋಡಿ

ಗುರುತಿಸಿದ್ದು ಅದನ್ನು ನಿಪಿ 13 ಎಂದು, ಸಾಕ್ಷಿಯ ಸಹಿಯನ್ನು ನಿಪಿ 13(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ- ಆರೋಪಿ ಪರ ಶ್ರೀ.ಎಸ್ ಎನ್ ಪಿ ವಕೀಲರಿಂದಃ-

1 ನೇ ಆರೋಪಿ ನನ್ನ ಗಂಡ ಎಂದರೆ ಸರಿ. 2 ಮತ್ತು 4 ನೇ ಆರೋಪಿತರು ನನ್ನ ಗಂಡನ ಅಕ್ಕಂದಿರು ಎಂದರೆ ಸರಿ. 2 ನೇ ಆರೋಪಿಯನ್ನು ಎಲ್ಲಿಗೆ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಹಾಡೋನಹಳ್ಳಿಗೆ ಎಂದು ನುಡಿಯುತ್ತಾರೆ. ಹಾಡೋನಹಳ್ಳಿ ಶಿವಮೊಗ್ಗ ಜಿಲ್ಲೆಯಲ್ಲಿ ಬರುತ್ತದೆ ಎಂದರೆ ಸರಿ. 4 ನೇ ಆರೋಪಿಯನ್ನು ಎಲ್ಲಿಗೆ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಚೀಲೂರು ಗ್ರಾಮ. 1 ನೇ ಆರೋಪಿ ಎಲ್ಲಿ ವಾಸವಿದ್ದಾರೆ ಎಂದರೆ ಸಾಕ್ಷಿ ಮಲ್ಲಿಗೇನಹಳ್ಳಿ ಎಂದು ನುಡಿಯುತ್ತಾರೆ. ಮಲ್ಲಿಗೇನಹಳ್ಳಿಗೂ ಹಾಡೋನಹಳ್ಳಿಗೂ ಸುಮಾರು 50 ಕಿ.ಮೀ ಅಂತರ ಇದೆ ಎಂದರೆ ಇರಬಹುದು ಎಂದು ನುಡಿಯುತ್ತಾರೆ. ಮಲ್ಲಿಗೇನಹಳ್ಳಿಗೂ ಚೀಲೂರಿಗೆ ಸುಮಾರು 50 ಕಿ.ಮೀ ಅಂತರ ಇದೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 3 ನೇ ಆರೋಪಿ ನನಗಾಗಲೀ ಆರೋಪಿಗಾಗಲೀ ಸಂಬಂಧಿಕರಲ್ಲ ಎಂದರೆ ಸರಿ. 5 ನೇ ಆರೋಪಿ ಯಾರು ಎಂದರೆ ಸಾಕ್ಷಿ 4 ನೇ ಆರೋಪಿಯ ಗಂಡ ಎಂದು ನುಡಿಯುತ್ತಾರೆ. 6 ನೇ ಆರೋಪಿ ನನಗೆ ಏನಾಗಬೇಕು ಎಂದರೆ ಸಾಕ್ಷಿ ಯಾವುದೇ ಸಂಬಂಧಿಕರಲ್ಲ ಎಂದು ನುಡಿಯುತ್ತಾರೆ. 7 ನೇ ಆರೋಪಿ ನನಗೆ ಏನಾಗಬೇಕು ಎಂದರೆ ಸಾಕ್ಷಿಯು ನನ್ನ ಗಂಡನ ಮಾವ ಎಂದು ನುಡಿಯುತ್ತಾರೆ.

ನನ್ನ ಮದುವೆ ಯಾವಾಗ ಎಲ್ಲಿ ಆಗಿರುತ್ತದೆ ಎಂದರೆ ಸಾಕ್ಷಿಯು ದಿಃ 02.03.2017 ರಂದು ಮಲ್ಲಿಗೇನಹಳ್ಳಿಯ ನನ್ನ ಗಂಡನ ಮನೆಯಲ್ಲಿ ಎಂದು ನುಡಿಯುತ್ತಾರೆ. ನನ್ನ ಮದುವೆಯ ಸಂಪೂರ್ಣ ಖರ್ಚು ವೆಚ್ಚ ವನ್ನು 1 ನೇ ಆರೋಪಿ ಹಾಗೂ ಅವರ ಕುಟುಂಬದವರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ವಿವಾಹದ ಸಂದರ್ಭ ನಮ್ಮ ತಂದೆಯವರು 1 ನೇ ಆರೋಪಿಗೆ ಸುಮಾರು 8 ತೊಲ ಬಂಗಾರವನ್ನು ನೀಡಿದ್ದರು ಎಂದು ಹೇಳಿದ್ದು ಅದಕ್ಕೆ ಸಂಬಂಧಿಸಿದಂತೆ ಪೋಲೀಸರಿಗೆ ಯಾವುದಾದರೂ ದಾಖಲೆ ನೀಡಿದ್ದೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ವಿವಾಹದ ಸಂದರ್ಭದಲ್ಲಿ 1,05,000/- ರೂ ಹಣ ಹಾಗೂ 8 ತೊಲ ಬಂಗಾರ ಆರೋಪಿಗೆ ವರದಕ್ಷಿಣೆಯಾಗಿ ನೀಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸಾಕ್ಷಿಯು ವರದಕ್ಷಿಣೆಯಾಗಿ ನೀಡಿಲ್ಲ ಆದರೆ ಉಡುಗೊರೆಯ ರೂಪದಲ್ಲಿ ನೀಡಿರುತ್ತೇವೆ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.